ಕಾಮಗಾರಿಗಳು ಪೂರ್ಣ ಗೊಂಡಿವೆ. ಕಾಮಗಾರಿಗಳು ಪೂರ್ಣಗೊಂಡಿವೆ. ಬಾಕಿ ಕಾಮಗಾರಿ ಗಳು ಪ್ರಗತಿಯಲ್ಲಿರುತ್ತದೆ

ಆ) ಈ ಯೋಜನೆಗಳಡಿ ಸಮುದಾಯ ಭವನ ನಿರ್ಮಾಣ, ರಸ್ತೆ ಮತ್ತು ಚರಂಡಿ ನಿರ್ಮಾಣ ಹಾಗೂ ಕಾಲುವೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ, ಕೈಗೆತ್ತಿಕೊಳ್ಳಲಾದ ಕಾಮಗಾರಿಗಳು ಪ್ರಗತಿಯಲ್ಲಿದ್ದು ಬಹುತೇಕ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ (ಸಮುದಾಯ ಭವನ ಕಾಮಗಾರಿಗಳ ಟೆಂಡರ ಕರೆಗಳು 4–5 ಸಾಲಿ ಪುನರಾವರ್ತನೆಯಾಗಿದ್ದರಿಂದ ಅನುಷ್ಠಾನದಲ್ಲಿ ವಿಳಂಬವಾಗಿರುತ್ತವೆ.)

ಇ) 2011–12ನೇ ಸಾಲಿನ ಕಾಮಗಾರಿಗಳಿಗೆ ಸರ್ಕಾರವು ಅನುದಾನವನ್ನು ಬಿಡುಗಡೆಗೊಳಿಸಿದ್ದು ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ) 2011–12ನೇ ಸಾಲಿನಲ್ಲಿನ ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತದೆ

ಉ) 2011–12ನೇ ಸಾಲಿನ ಕಾಮಗಾರಿಗಳಿಗೆ ಅನುದಾನದ ಕೊರತ ಇರುವುದಿಲ್ಲ

ಊ) 2011–12ನೇ ಸಾಲಿನ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಸ್ಥಗಿತ ಗೊಳಿಸಲು ಸರ್ಕಾರವು ಯಾವುದೇ ಆದೇಶವನ್ನು ನೀಡಿರುವುದಿಲ್ಲ.

ಋ) ಅನ್ವಯಿಸುವುದಿಲ್ಲ.

ಒಳನಾಡು ಮೀನುಗಾರಿಕೆ ಅಭಿವೃದ್ಧಿ

6 (56) ಶ್ರೀ ಬಾಲಕೃಷ್ಣ ಸಿ.ಎನ್ (ಶ್ರವಣಬೆಳಗೊಳ) ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಒಳನಾಡು ಮೀನುಗಾರಿಕಾ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಆ) ಈ ಜಿಲ್ಲಾ ವ್ಯಾಪ್ತಿಯಲ್ಲಿ ಒಳನಾಡು ಮೀನುಗಾರಿಕಾ ಅಭಿವೃದ್ಧಿಗಾಗಿ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಾವುವು, ಈ ಮೀನು ಗಾರಿಕೆಯಲ್ಲಿ ತೊಡಗಿಸಿಕೊಂಡ ಮೀನುಗಾರರ ಸಂಖ್ಯೆ ಎಷ್ಟು, ವಿವರ ಒದಗಿಸುವುದು,

ಇ) ಒಳನಾಡು ಮೀನುಗಾರಿಕೆಗೆ ಸಂಬಂಧಪಟ್ಟ ಹಾಗೆ ಕೇಂದ್ರ ರಾಜ್ಯ ಮತ್ತು ಜಿಲ್ಲಾ ವಲಯಗಳ ಕಾರ್ಯಕ್ರಮಗಳ ಅನುಷ್ಠಾನದ ವಿವರಗಳೇನು,

ಈ) ಹುಡ್ಕೊ ನೆರವಿನ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಎಷ್ಟು ಜನ ಬಡ ಮೀನುಗಾರರಿಗೆ ವಸತಿ ಯೋಜನೆಯ ಸೌಲಭ್ಯವನ್ನು ಒದಗಿಸಿ ಕೊಡಲಾಗಿದೆ, ವಸತಿ ರಹಿತ ಮೀನುಗಾರರ ಕುಟುಂಬಗಳ ಸಂಖ್ಯೆ ಎಷ್ಟು?

ಶ್ರೀ ಅಭಯಚಂದ್ರ ಜೈನ್ (ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರು)

ಅ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಒಳನಾಡು ಮೀನುಗಾರಿಕಾ ಅಭಿವೃದ್ಧಿಗಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ

- ಹಾಸನ ಜಿಲ್ಲೆಯ ಜಲಾಶಯ ಮತ್ತು ಕೆರೆಗಳಲ್ಲಿ ಮೀನುಮರಿ ಬಿತ್ತನೆ ಮಾಡಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
- ಖಾಸಗಿ ಜಮೀನಿನಲ್ಲಿ ಮೀನು ಕೃಷಿ ಕೊಳ ನಿರ್ಮಿಸಲು ಸಹಾಯ ಧನ ನೀಡಲಾಗುತ್ತದೆ
- ಮೀನುಮರಿ ಖರೀದಿಸಲು ಸಹಾಯಧನ ನೀಡಲಾಗುತ್ತಿದೆ
- ಮೀನು ಹಿಡುವಳಿ ಮತ್ತು ಮೀನು ಮಾರಾಟಕ್ಕಾಗಿ ಬೇಕಾದ ಅಗತ್ಯ ಸಲಕರಣೆಗಳನ್ನು ನೀಡಲಾಗುತ್ತಿದೆ.

ಆ) ಈ ಜಿಲ್ಲಾ ವ್ಯಾಪ್ತಿಯಲ್ಲಿ ಒಳನಾಡು ಮೀನುಗಾರಿಕಾ ಅಭಿವೃದ್ಧಿಗಾಗಿ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರವನ್ನು ಕೆಳಗಿನಂತೆ ನೀಡಲಾಗಿದೆ.

- ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ ಯೋಜನೆಯಡಿ ಮೀನುಮರಿ ಕೇಂದ್ರಗಳ ನಿರ್ವಹಣೆ ಮತ್ತು ಸಣ್ಣ ಪ್ರಮಾಣದ ಕೊಳಗಳಲ್ಲಿ ರೈತರಿಗೆ 500 ರಿಂದ 1000 ಮೀನುಮರಿಗಳನ್ನು ಉಚಿತವಾಗಿ ವಿತರಣೆ,

- ಮೀನುಗಾರಿಕೆ ಕಟ್ಟಡಗಳು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ ಯೋಜನೆಯಡಿ ಮೀನುಮರಿ ಉತ್ಪಾದನಾ ಕೇಂದ್ರಗಳ ಕಾಮಗಾರಿಗಳ ನಿರ್ವಹಣೆ

- ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ ಯೋಜನೆಯಡಿ ಸೈಕಲ್ ಮತ್ತು ಐಸ್‌ಬಾಕ್ಸ್, ದ್ವಿಚಕ್ರ ಮತ್ತು ತ್ರಿಚಕ್ರ ವಾಹನ ಖರೀದಿಸಲು ನೆರವು.

- ಮೀನುಮರಿ ಖರಿದಿಗೆ ಸಹಾಯಧನ.

- ರೂ 10,000/– ಮೌಲ್ಯದ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ

- ಮಹಿಳಾ ಮೀನುಗಾರರಿಗೆ ಶಾಖನಿರೋಧಕ ಪೆಟ್ಟಿಗೆಗಳ ವಿತರಣೆ

- ರಾಷ್ಟ್ರೀಯ ಪ್ರೋಟೀನ್ ಪೂರೈಕೆ ಅಭಿಯಾನ ಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯ.

ಜಿಲ್ಲೆಯಲ್ಲಿ ಅಂದಾಜು 3200 ಸಕ್ರಿಯ ಮೀನುಗಾರರು ವೃತ್ತಿಯನ್ನು ಅವಲಂಬಿಸಿರುತ್ತಾರೆ.

ಇ) ಒಳನಾಡು ಮೀನುಗಾರಿಕೆಗೆ ಸಂಬಂಧಪಟ್ಟ ಹಾಗೆ ರಾಜ್ಯದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿರುವ ಕೇಂದ್ರ, ರಾಜ್ಯ ಮತ್ತು ಜಿಲ್ಲಾ ವಲಯ ಗಳ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಈ) ಹುಡ್ಕೊ ನೆರವಿನ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಒಟ್ಟು 10.000 ಮಂದಿ ಬಡ ಮೀನುಗಾರರಿಗೆ ವಸತಿ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ ಇದಲ್ಲದೇ ರಾಜ್ಯ ವಲಯದಡಿ ಮತ್ಸ್ಯಾಶ್ರಯ ಯೋಜನೆಯಡಿ 2000 ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ

ರಾಜ್ಯದಲ್ಲಿ ಒಟ್ಟು 38.000 ವಸತಿ ರಹಿತ ಮೀನುಗಾರರ ಕುಟುಂಬ ಗಳಿರುತ್ತವೆ ಎಂದು ಅಂದಾಜಿಸಲಾಗಿದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ ಎನ್. (ಶ್ರವಣಬೆಳಗೊಳ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 56ಕ್ಕೆ ಅನುಬಂಧ

ಕೇಂದ್ರ ಯೋಜನೆಗಳು

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೀನುಗಾರಿಕೆ ಇಲಾ ಖೆಯ ಮೀನುಮರಿ ಕೇಂದ್ರಗಳನ್ನು ಉತ್ತಮಗೊಳಿಸಲು ಅನುದಾನ ಒದಗಿಸಲಾಗಿದೆ. ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

- ರಾಷ್ಟ್ರೀಯ ಮಿಷನ್ ಫಾರ್ ಪ್ರೋಟೀನ್ ಸಪ್ಲಿಮೆಂಟ್ಸ್ (National Mission for Protein Supplement) ಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಾಣದ ಘಟಕ ವೆಚ್ಚ ರೂ.4.00 ಲಕ್ಷಗಳ ಶೇ.40 ರಷ್ಟು ಸಹಾಯಧನ

ರಾಜ್ಯ ವಲಯ ಯೋಜನೆಗಳು

- ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ ಯೋಜನೆಯಡಿ ರೂ 10.000/– ಮೌಲ್ಯದ ಮೀನುಗಾರಿಕೆ ಸಲಕರಣೆಗಳಾದ ಮೀನು

ಹಿಡಿಯುವ ಬಲೆ ಮತ್ತು ಪೂರಕ ಸಾಮಗ್ರಿಗಳನ್ನು "ಕಿಟ್" ರೂಪದಲ್ಲಿ ವಿತರಣೆ.

- ಮೀನುಮರಿ ಉತ್ಪಾದನೆ, ಸಾಕಾಣಿಕೆ ಕೇಂದ್ರಗಳ ನಿರ್ವಹಣೆ
- ಸರ್ಕಾರಿ ಸ್ವಾಮ್ಯದ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ 50ರಷ್ಟು ಅಂದರೆ ವ್ಯಕ್ತಿಗತ ಗರಿಷ್ಟ ರೂ.5,000/– ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ 20,000/– ಕೈ ಮಿತಿಗೊಳಪಟ್ಟು ಸಹಾಯಧನ
- "ಸುವರ್ಣಭೂಮಿ" ಯೋಜನೆಯಡಿ 100 ಚದುರ ಮೀಟರ್ ಹೊಸ ಮೀನು ಪಾಲನಾ ಕೊಳ/ನೀರು ಸಂಗ್ರಹಣಾ ಕೂಳ ಮತ್ತು ಈಗಾಗಲೇ ನೀರು ಸಂಗ್ರಹಣಾ ಕೊಳ ಹೊಂದಿದ್ದಲ್ಲಿ ಕನಿಷ್ಠ 150 ಚ.ಮೀ.ವರೆಗೆ ವಿಸ್ತರಣೆ / ನವೀಕರಣ ಕೈಗೊಳ್ಳಲು ಪ್ರತಿ ಕೃಷಿಕನಿಗೆ ಪ್ರೋತ್ಸಾಹಧನವಾಗಿ ರೂ 10,000/–ಗಳನ್ನು ನೀಡಿಕೆ
- ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ ನರಪಿನೂಂದಿಗ ರಾಜ್ಯದ ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ಕೆರೆ/ಜಲಾಶಯಗಳ ಅಭಿವೃದ್ಧಿ, ಕೊಳಗಳ ನಿರ್ಮಾಣಕ್ಕೆ ಸಹಾಯಧನ, ಮಾರುಕಟ್ಟೆ, ತರಬೇತಿ ಮುಂತಾದ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಲಾಗುತ್ತಿದೆ.
- ಮೀನುಮರಿ ಉತ್ಪಾದನೆಯನ್ನು ಹೆಚ್ಚಿಸಲು ಮೀನುಮರಿ ಉತ್ಪಾದನಾ ಕೇಂದ್ರಗಳ ನಿರ್ಮಾಣ ಕೈಗೊಳ್ಳಲಾಗುತ್ತಿದೆ.
- ಮೀನುಮಾರುಕಟ್ಟೆಗಳ ನಿರ್ಮಾಣಕ್ಕಾಗಿ ರಾಷ್ಟೀಯ ಮೀನುಗಾರಿಕ ಅಭಿವೃದ್ಧಿ ಮಂಡಳಿಯು ಯೋಜನಾ ವೆಚ್ಚದ ಶೇ.90ರಷ್ಟು ಸಹಾಯ ಧನವಾಗಿ ನೀಡುತ್ತಿದ್ದು ಉಳಿದ ಶೇ.10 ರಷ್ಟನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಲಾಗುವುದು

ಜಿಲ್ಲಾ ವಲಯ ಯೋಜನೆಗಳು

- ಕೃಷಿಗೆ ಯೋಗ್ಯವಲ್ಲದ ಜೌಗು/ಚೌಳು ಭೂಮಿಯಲ್ಲಿ, ಮೀನು ಕೊಳಗಳ ನಿರ್ಮಾಣ ಮಾಡಿ ಮೀನು ಪಾಲನೆಯನ್ನು ತೆಗೆದು ಕೊಳ್ಳಲು ಒಂದು ಎಕರೆಗೆ ರೂ.30,000/– ಗಳಂತೆ ಸಹಾಯಧನ ಹಾಗೂ ಸ್ವಂತ ಜಮೀನಿನಲ್ಲಿ 1 ಎಕರೆ ಮೀನು ಕೊಳ ನಿರ್ಮಾಣಕ್ಕೆ ರೂ.10,000/–ಗಳ ಸಹಾಯಧನ

- ಕೆರೆಗಳಲ್ಲಿ ಬೆಳೆದಿರುವ ಕಳೆಗಳ ನಿರ್ಮೂಲನೆಗೆ ಹುಲ್ಲು ಗೆಂಡೆ ಮೀನುಮರಿ ಬಿತ್ತನೆ ಮಾಡಲು ಶೇ.50ರಷ್ಟು ಗರಿಷ್ಠ ರೂ.5000/– ಗಳ ಸಹಾಯಧನ ನೀಡಲಾಗುತ್ತಿದೆ.

- ಸ್ವಂತ ನೀರಾವರಿ ಬಾವಿ ಮತ್ತು ಹೊಂಡಗಳಲ್ಲಿ ಮೀನು ಕೃಷಿಯನ್ನು ತೆಗೆದುಕೊಳ್ಳಲು ಮುಂದೆ ಬರುವ ಕೃಷಿಕರಿಗೆ ಉಚಿತವಾಗಿ 250 ರಿಂದ 1000 ಸಾಮಾನ್ಯಗೆಂಡೆಯನ್ನು ಸರಬರಾಜು ಮಾಡಲಾಗುತ್ತಿದೆ.

- ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ

- ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು, ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ, ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಸಹಾಯಧನ

7(57) **ಶ್ರೀ ಬಾಲಕೃಷ್ಣ ಸಿ ಎನ್ (ಶ್ರವಣ ಬೆಳಗೊಳ)** . ಕಾರ್ಮಿಕರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?